**ದಿನಾಂಕಃ 22-07-2024** **CC 298/2018 (ಪಿ.ಡಬ್ಲ್ಯು.1)**

**ಇಂದು ದಿನಾಂಕಃ 22-07-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರಿಂದ :-**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. 2015 ರಲ್ಲಿ ನನ್ನ ಮದುವೆ ಆಗಿರುತ್ತದೆ. ನಿಮ್ಮ ಗಂಡನ ವಿರುದ್ಧ ನೀವು ಈ ನ್ಯಾಯಾಲಯದಲ್ಲಿ ಯಾವುದಾದರೂ ಪ್ರಕರಣ ದಾಖಲಿಸಿದ್ದೀರಾ ಎಂದು ಪ್ರಶ್ನಿಸಿದರೆ ಸಾಕ್ಷಿ ಅದನ್ನು ನಾನು ಹೇಳಲು ಬಯಸುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡನ ವಿರುದ್ದ ಯಾವ ವರ್ಷದಂದು ಪ್ರಕರಣ ದಾಖಲಿಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಪ್ರಕರಣ ದಾಖಲಿಸಿಲ್ಲ ಎಂದು ನುಡಿಯುತ್ತಾರೆ. ಜೀವನಾಂಶಕ್ಕಾಗಿ ಸಲ್ಲಿಸಿದ ಅರ್ಜಿಯಲ್ಲಿ ನ್ಯಾಯಾಲಯದಲ್ಲಿ ನನಗೆ ಶಿವರಾಯ ಹಾದಿಮನಿ ವಕೀಲರು ನನಗೆ ಪಾಟೀಸವಾಲು ಮಾಡಿದ ಕಾರಣ ನಾನು ಅವರ ಮೇಲೆ ಹಲ್ಲೆ ಮಾಡಿದ್ದೇನೆ ಎಂದರೆ ಸಾಕ್ಷಿ ನಾನು ಹಲ್ಲೆ ಮಾಡಿಲ್ಲ ಎಂದು ನುಡಿಯುತ್ತಾರೆ. ಶಿವರಾಯ ಹಾದಿಮನಿ ವಕೀಲರು ನನ್ನ ವಿರುದ್ದ ಪ್ರಕರಣ ದಾಖಲಿಸಿದ್ದರು ಎಂದು ಸೂಚಿಸಿದಾಗ ಸಾಕ್ಷಿ ಅವರು ಸಹ ದಾಖಲಿಸದ್ದರೂ ಮತ್ತು ನಾವು ಸಹ ದಾಖಲಿಸಿದ್ದೇವೆ ಎಂದು ನುಡಿಯುತ್ತೇವೆ.

ನಾನು ಈಗ 10 ವರ್ಷಗಳಿಂದ ಹಾಸನದಲ್ಲಿ ವಾಸವಿರುತ್ತೇನೆ. ನನ್ನ ದೂರಿನಲ್ಲಿ ಹಾಸನದಲ್ಲಿ ವಾಸವಿರುವ ಬಗ್ಗೆ ಬರೆಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಬೆಂಗಳೂರಿನಲ್ಲಿ ಸಹ ವಾಸವಿದ್ದೇವೆ ಆದ್ದರಿಂದ ಬೆಂಗಳೂರುನಲ್ಲಿ ವಾಸ ಎಂದು ಬರೆಸಿದ್ದೇವೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ಅರ್ಜಿಯಲ್ಲಿ ಸುಧಾಕರ ರವರ ಪರವಾಗಿ ಹಾದಿಮನಿ ವಕೀಲರು ನೇಮಕ ವಾಗಿದ್ದರು ಎಂದರೆ ಸಾಕ್ಷಿ ಸುಧಾಕರ ಯಾರು ಎಂಬುದು  ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸುಧಾಕರ ನನ್ನ ಗಂಡ ಎಂದರೆ ಸರಿಯಲ್ಲ.

ಘಟನೆ ಆದ ಮನೆಸಂಖ್ಯೆಃ ನನಗೆ ಗೊತ್ತಿಲ್ಲ. ಘಟನೆ ಆದ ಸ್ಥಳದ ಚೆಕ್ಕುಬಂದಿ ಏನು ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಓದಿಲ್ಲ ಅದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಿನ ಜಗಳಾದಾಗ ನನ್ನ ಕೈಯಲ್ಲಿ ಕಪ್ಪು ಬಣ್ಣದ ಬಳಿ ಇದ್ದವು. ಘಟನೆಯಾದಾಗ ಬಳೆ ಒಡೆದಿದ್ದವು. ಘಟನೆ ಆದಾಗ ಬಳೆ ಓಡೆದು ನನ್ನ ಕೈಗೆ ಚುಚ್ಚಿದ್ದವು. ಕೂದಲು ಜಗ್ಗಿದಾಗ ಕೂದಲು ಕಿತ್ತದ್ದವು ಎಂದು ಪ್ರಶ್ನಿಸಿದಾಗ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಬಳೆ ಹತ್ತಿ ರಕ್ತ ಬಂದಾಗ ನಿನ್ನ ಬಟ್ಟೆಗೆ ರಕ್ತ

ಹತ್ತಿತಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಅಷ್ಟೊಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಿನ ನಾನು ನೈಟಿ ಧರಿಸಿದ್ದೆ. ಆ ದಿನ ನೈಟಿ ಹರಿದಿತ್ತು. ಆ ದಿನ ಘಟನೆ 5 ನಿಮಿಷಗಳ ಕಾಲ ನಡೆದಿತ್ತು. ಘಟನೆ ಪ್ರಾರಂಭವಾದಾಗ ಸಂಜೆ 5 ಗಂಟೆ ಆಗಿತ್ತು. ಘಟನೆ ಆದ ನಂತರ ಮೊದಲು ಸುಲೇಪೇಟ ಸರಕಾರಿ ಆಸ್ಪತ್ರೆಗೆ ಹೋಗಿದ್ದೆ. ಸುಲೇಪೇಟ ಸರಕಾರಿ ಆಸ್ಪತ್ರೆಗೆ ಹೋದಾಗ ಸಮಯ ಎಷ್ಟು ಆಗಿತ್ತು ಎಂದು ನೆನಪಿಲ್ಲ.

**ಮುಂದುವರೆದ ಪಾಟೀಸವಾಲು ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**